ವೆಬ್‌ಸೈಟ್: www.kuvempu.ac.in
ದೂರವಾಣಿ:08282- 256166,7022254997 ಇ-ಮೇಲ್: regexamku@gmail.com
ಕುವೆಂಪು ವಿಶ್ವವಿದ್ಯಾಲಯ
ಕುಲಸಚಿವರು(ಮೌಲ್ಯಮಾಪನ)ರವರ ಕಛೇರಿ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ. ಕರ್ನಾಟಕ.

Re-Accredited by NAAC with 'A' Grade, Ranked 73rd place in NIRF-2019 & 45th place at National Level in SCIMAGO Rankings

ಸಂಖ್ಯೆ:ಕುವಿ:ಪವಿ:ಯುಜಿ-2/19/2020-21/3859 ದಿನಾಂಕ:04.09.2020.

## ಸುತ್ತೋಲೆ

ವಿಷಯ: ಸೆಪ್ಟಂಬರ್/ಅಕ್ಟೋಬರ್-2020ರಲ್ಲಿ ನಡೆಯುವ ಸ್ನಾತಕ ಪದವಿ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಾಂಶುಪಾಲರುಗಳ ಪೂರ್ವಭಾವಿ ಸಭೆಯ ಕುರಿತು.

**ಉಲ್ಲೇಖ: 01.ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು, ಇವರ ಪತ್ರ ಸಂಖ್ಯೆ:ಇಡಿ/197/ಯುಎನ್‌ಇ/2020, ದಿನಾಂಕ:04.08.2020.**

**02.ಕಾರ್ಯದರ್ಶಿಗಳು, ಯು.ಜಿ.ಸಿ., ನವದೆಹಲಿ ಇವರ ಪತ್ರ ಸಂಖ್ಯೆ:ಡಿ.ಓ.ನಂ: ಎಫ್.1-1/2000, ದಿನಾಂಕ:08.07.2020.**

03 ಕಛೇರಿ ಪತ್ರ ಸಂಖ್ಯೆ ಕುವಿ/ಪವಿ/ಯು.ಜಿ-2/ 3857/2020-21, ದಿನಾಂಕ:04-09-2020

*****

ಕುವೆಂಪು ವಿಶ್ವವಿದ್ಯಾಲಯದ ಸ್ನಾತಕ ಪದವಿ ಪರೀಕ್ಷೆಗಳನ್ನು ಉಲ್ಲೇಖ(1) ಹಾಗೂ (2)ರ ಆದೇಶಗಳಂತೆ ಕೋವಿಡ್-19 ತಡೆಯುವ ಹೊಸ ಮಾರ್ಗ ಸೂಚನೆಯಂತೆ ನಡೆಸಬೇಕಾಗಿರುವುದರಿಂದ ಉಲ್ಲೇಖ(3) ರ ಸುತ್ತೋಲೆಯಲ್ಲಿ ಈಗಾಗಲೇ ಪರೀಕ್ಷಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ದಿನಾಂಕ: 14-09-2020 ರಿಂದ ಸ್ನಾತಕ ಪದವಿ ಪರೀಕ್ಷೆಗಳು ಪ್ರಾರಂಭಗೊಳ್ಳಲಿರುವುದರಿಂದ ಕೋವಿಡ್-19 ಸಾಂಕ್ರಾಮಿಕ ರೋಗವು ಹರಡದಂತೆ ಮುಂಜಾಗೃತಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಪರೀಕ್ಷಾಪೂರ್ವದಲ್ಲಿ ತೆಗೆದುಕೊಳ್ಳಬೇಕಾದ ಸುರಕ್ಷಿತ ಕ್ರಮಗಳ ಕುರಿತಾಗಿ ಎಲ್ಲಾ ಪ್ರಾಂಶುಪಾಲರುಗಳೊಂದಿಗೆ ಚರ್ಚಿಸಬೇಕಿರುವುದರಿಂದ ಮಾನ್ಯ ಕುಲಪತಿಗಳ ಆದೇಶದನ್ವಯ ದಿನಾಂಕ:**09-09-2020**ರಂದು ಪ್ರಾಂಶುಪಾಲರುಗಳ ಸಭೆಯನ್ನು ಕರೆಯಲಾಗಿದೆ. ಎಲ್ಲಾ ಪ್ರಾಂಶುಪಾಲರುಗಳು ಈ ಸಭೆಗೆ ತಪ್ಪದೇ ಹಾಜರಾಗಲು ಕೋರಿದೆ. ಹಾಗೂ ತಮ್ಮೊಡನೆ ತಮ್ಮ ಕಾಲೇಜಿನಲ್ಲಿ ಪರೀಕ್ಷಾ ಕಾರ್ಯ ನಿರ್ವಹಿಸುವ ಸಿಬ್ಬಂದಿ ಅಥವಾ ಕಂಪ್ಯೂಟರ್ ಆಪರೇಟರ್ ಇವರಲ್ಲಿ ಒಬ್ಬರನ್ನು ಕರೆತರಲು ಕೋರಿದೆ. ಈ ಸಂಬಂಧ ವಿಶ್ವವಿದ್ಯಾಲಯದಿಂದ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ.

ಯುಜಿಸಿ ಹಾಗೂ ಕೇಂದ್ರ/ರಾಜ್ಯ ಸರ್ಕಾರಗಳ ಸೂಚನೆಯಂತೆ ಕೋವಿಡ್-19ನ ಹಿನ್ನೆಲೆಯಲ್ಲಿ ಕೆಲವು **'ವಿದ್ಯಾರ್ಥಿ ಸ್ನೇಹಿ'** ಆನ್‌ಲೈನ್ ಸೇವೆಗಳನ್ನು ಹೆಚ್ಚುವರಿಯಾಗಿ ನೀಡಲು ಉದ್ದೇಶಿಸಿದ್ದು ಸದರಿ e-governanceನ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿದ್ದು, ಮಾನ್ಯ ಕುಲಪತಿಯವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಸ್ಥಳ: ವಿಶ್ವವಿದ್ಯಾಲಯದ ಬಸವ ಸಭಾ ಭವನ(Convocation New Auditorium)
ಸಮಯ: 10.30ಬೆಳಿಗ್ಗೆ

(ಪ್ರೊ. ಪಿ.ಕಣ್ಣನ್)
ಕುಲಸಚಿವ(ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ-577451, ಶಿವಮೊಗ್ಗ ಜಿಲ್ಲೆ

ವಿ.ಸೂ.: ಮುಖಗವುಸು(**Face Mask**)ನ್ನು ಧರಿಸುವುದು ಮತ್ತು ಭೌತಿಕ ಅಂತರವನ್ನು ಕಾಯ್ದುಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿರುತ್ತದೆ.

ಗೆ,

ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಯ ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:-

1. ಆಪ್ತಶಾಖೆ, ಮಾನ್ಯಕುಲಪತಿ, ಕುಲಸಚಿವ(ಆಡಳಿತ), ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
2. ನಿರ್ದೇಶಕರು, ಪಿ.ಎಂ.ಇ ಮಂಡಳಿ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
3. ಸರ್ಕಾರಿ ಲೆಕ್ಕಪರಿಶೋಧಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ.
4. ಉಪಕುಲಸಚಿವರು: ಸಹಾಯಕ ಕುಲಸಚಿವರು, ಪರೀಕ್ಷಾಂಗ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
5. ಅಧೀಕ್ಷಕರು, ಪರೀಕ್ಷಾ ವಿಭಾಗ ಹಾಗೂ ಕಂಪ್ಯೂಟರ್ ವಿಭಾಗ, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
6. ಗ್ರಂಥಪಾಲಕರು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ – ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.
7. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾನಿಲಯ, ಶಂಕರಘಟ್ಟ
8. ನಿರ್ದೇಶಕರು, UCCF ಕಛೇರಿ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
9. ಎಲ್ಲಾ ವಿಷಯ ನಿರ್ವಾಹಕರು, ಪರೀಕ್ಷಾ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
10. ಕಛೇರಿ ಪ್ರತಿ.